pate in the debate in the House during the remainder of the day's sitting.

ಶ್ರೀ ವಾಟಾಳ್ ನಾಗರಾಜ್.—ಏನು ಸ್ವಾಮಿ, ತಾವು ಮಾತೆತ್ತಿದರೆ ಹೊರಗಡೆ ಹೊಗಿ ಎಂದು ಹೇಳುತ್ತೀರಿ.

Mr. SPEAKER.—The Hon. Member may please resume his seat.

ಶ್ರೀ ವಾಟಾಳ್ ನಾಗರಾಜ್.—ತಾವು ಆ ರೀತಿ ನಡೆದುಕೊಳ್ಳುವುದು ಒಳ್ಳೆಯದಲ್ಲ.

Mr. SPEAKER.—Under rule 308 of the Rules of Procedure I order the Hon. Member Sri Vatal Nagaraj also to withdraw from the House and he shall not participate in the debate in the House during the remainder of the day's sitting.

[Hon. Members Sriyuths Azeez Sait and Vatal Nagaraj withdrew from the House]

ಶ್ರೀ ಬಿ. ಪಿ. ಗಂಗಾಧರ್.—ಮಾನ್ಯ ಬಂಗಾರಪ್ಪನವರು ಅರಿಕೆ ಮಾಡಿದಂತೆ ನನಗೆ ಸರಕಾರದ ಉದ್ದೇಶ ಅರ್ಥವಾಗುತ್ತಿಲ್ಲ: ಅದಕ್ಕೋಸ್ಕರ ನಾನು ತಮ್ಮನ್ನು ಇಲ್ಲಿ ಕೇಳುತ್ತೇನೆ. ನಾನು ನುಮಾರು 10 ಪ್ರಶ್ನೆಗಳನ್ನು ಕಳಿಸಿದ್ದರೂ ಇದುವರೆಗೆ ಒಂದು ಪ್ರಶ್ನೆಗಾದರೂ ಸರಕಾರ ಉತ್ತರ ಕಳುಹಿಸಿಲ್ಲ. ನಮ್ಮ ತುಮಕೂರು ಟೌನು ಬಹಳ ವ್ಯಾಪಸ್ಯವಾದಮ್ಮ ಇಲ್ಲಿಗೆ ಮುಖ್ಯ ವಾಗಿ ಬೇಕಾಗಿರುವ ಅಂಡರಗ್ರೌಂಡು ಡ್ರೈನೇಜು ಹಾಗೂ ವಾಟರು ಸಪ್ಲೈ ವಿಚಾರದಲ್ಲಿ ಒಂದು ಪ್ರಶ್ನೆ ಕಳುಹಿಸಿದ್ದೆ. ಇಲ್ಲಿ ಕೆಲವು ದಾವಿಗಳನ್ನು ತೆಗೆಸಿದ್ದರು. ಇದನ್ನು ಸರಕಾರದ ಪರ್ಮಿಷನ್ ಇಲ್ಲದೆ ಮುಚ್ಚಿದ್ದಾರೆ. ಇದನ್ನು ಯಾರೂ ಕೇಳುತ್ತಿಲ್ಲ. ಹೀಗೆ ಅರ್ಜೆಂಟಾದ ಪ್ರಶ್ನೆಗಳನ್ನು ಕಳುಹಿಸಿದ್ದರೂ ಉತ್ತರ ಕೊಡದೆ ಇರುವುದಕ್ಕಾಗಿ ವಿಷಾದಪಡಬೇಕಾಗಿದೆ. ಇದಕ್ಕಾಗಿ ತಮ್ಮಲ್ಲಿ ನಾನು ಕೇಳುತ್ತಿರುವುದು.

Mr. SPEAKER.—I shall look into the matter.

ಶ್ರೀ ಸಿ. ಎಂ. ಎಸ್. ಶಾಸ್ತ್ರಿ (ಚಿಕ್ಕಮಗಳೂರು).—27 ಆಗಸ್ಟ್ 69ನೇ ಬುಧವಾರ ಕಡೂರು ತಾಲ್ಲೂಕು ಪಂಚನಹಳ್ಳಿ ಎಂಬ ಗ್ರಾಮದಲ್ಲಿ ಫ್ಯಾಮಿಲಿ ಪ್ಲಾನಿಂಗು ವಿಭಾಗದಲ್ಲಿ ಪಾರ್ವತಮ್ಮ ಎಂಬುವರಿಗೆ ಶಸ್ತ್ರ ಚಿಕಿತ್ಸೆಯಾಗಿತ್ತು. ಇವರು 1ನೇ ಸೆಪ್ಟೆಂಬರ್ 1969ರಂದು ಕಡೂರು ಜನರಲ್ ಆಸ್ಪತ್ರೆಯಲ್ಲಿ ಮರಣ ಹೊಂದಿದರು. ಇವರಿಗೆ ಬಹಳ ತೊಂದರೆಯಾಗಿದೆ ಎಂದು ನಾನು ಒಂದು ಪ್ರಶ್ನೆ ಕಳುಹಿಸಿದ್ದೆ. ಇದರ ಬಗ್ಗೆ ತಮ್ಮನ್ನು ಕೇಳುತ್ತಿದ್ದೇನೆ.

Mr. SPEAKER.—I shall look into the matter

Third Report of the Committee on Government Assurances

Presentation

Sri B. N. RAME GOWDA (Sira).—Sir, I beg to present. the Third Report of the Committee on Government Assurances.

Mr. SPEAKER.—Report is presented.